

## ಮುತ್ತುಗಳ ಕರಕುಶಲತೆ ಇದು

ಮಹಿಳೆಯರ ಸಹಜ ಸೌಂದರ್ಯ ಸ್ವಭಾವಕ್ಕೆ ಬೆಳ್ಳಿ ಬಂಗಾರದ ಒಡವೆಗಳೇ ಬೇಕೆಂದಿಲ್ಲ. ಕಡಿಮೆ ಬೆಲೆಯಲ್ಲಿ ಗಿಟ್ಟುವ ಮುತ್ತುಗಳು ಕೂಡಾ ಲಲನೆಯರ ಸೌಂದರ್ಯ ಇಮ್ಮಡಿಗೊಳಿಸುತ್ತವೆ ಎನ್ನುವುದಕ್ಕೆ ಮುಕ್ತಾ ಹೆಗಡೆ ಅವರು ಮಾಡಿದ ವಿವಿಧ ಬಗೆಯ ಮುತ್ತಿನ ಆಭರಣಗಳೇ ಸಾಕ್ಷಿ. ಮುತ್ತಿನ ಆಭರಣಗಳು ಮಹಿಳೆಯರ ಮೈ ಮಾಟ ಹೆಚ್ಚಿಸುತ್ತವೆ. ಮಾರುಕಟ್ಟೆಯಲ್ಲಿ ಸಿಗುವ ಬಂಗಾರದ ಬಣ್ಣ ಹೋಲುವ ಮುತ್ತು, ಹವಳದಿಂದ ವಿವಿಧ ಬಗೆಯ ಹಾರ, ಬಳೆ, ನೆಕ್ಲೇಸ್, ದೇವರ ಸರಗಳು, ಮೊಬೈಲ್ ಪರ್ಸ್, ದೇವರಿಗೆ ಮುತ್ತಿನ ದಂಡೆ, ಮಕ್ಕಳ ಜಡೆ ದಂಡೆ, ಒಟ್ಟಾರೆ ಆಕರ್ಷಿಸುತ್ತವೆ.

–ಮಲ್ಲಿಕಾರ್ಜುನ ರಾಜನಾಳ, ಗುಳೇದಗುಡ್ಡ



## ಗೂಡು ಬಿಟ್ಟ ಮರ!

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಅಲ್ಲಾಪಟ್ಟಣ ಎಂಬ ಹಳ್ಳಿ ಇದೆ. ಆ ಹಳ್ಳಿಯ ಮಗ್ಗಲಲ್ಲಿ ಜಯರಾಮೇಗೌಡನೆಂಬ ರೈತನ ತರಕಾರಿ ತೋಟವಿದೆ. ಈ ತೋಟದ ಮಗ್ಗುಲಲ್ಲಿರುವ ಸಾಧಾರಣ ಬಾವಿಗೆ ಚಾಚಿಕೊಂಡಂತೆ ಲಕ್ಕಿ ಮರವೊಂದು ಟಿಸಿಲೊಡೆದು ಬೆಳೆದಿದೆ. ಈ ಮರದ ರೆಂಬೆಗಳಲ್ಲಿ ನೇಕಾರ ಹಕ್ಕಿ (ವೀವಿಂಗ್ ಬರ್ಡ್ಸ್) ಗಳು 25ಕ್ಕೂ ಹೆಚ್ಚು ಗೂಡುಗಳನ್ನು ಕಟ್ಟಿವೆ. ಪ್ರತಿ ಕೊಂಬೆಯಲ್ಲೂ ಗೂಡುಗಳು ನೇತಾಡುತ್ತಿದ್ದು, ತಕ್ಷಣಕ್ಕೆ ನೋಡಿದರೆ ಈ ಮರ ಗೂಡು ಬಿಟ್ಟಿದೆಯೇನೋ ಎಂಬಂತೆ ಭಾಸವಾಗುತ್ತದೆ.

–ಗಣಂಗೂರು ನಂಜೇಗೌಡ, ಶ್ರೀರಂಗಪಟ್ಟಣ

## ಪ್ರಕೃತಿ ವಿಸ್ಮಯ...

ನಾನು ಈಚೆಗೆ ಸಂಬಂಧಿಯ ಮನೆಗೆ ಹೋಗಿದ್ದೆ. ಹಾಗೇ ಸುತ್ತಾಡಲೆಂದು ಹೊರಗೆ ಹೋದಾಗ ಒಂದು ಕಡ್ಡಿ ಮೇಲೆ ಚಿಕ್ಕ ಚಿಕ್ಕ ಚಿಟ್ಟೆಗಳು ಸರತಿಯ ಸಾಲಿನಲ್ಲಿ ಶಿಸ್ತಿನಿಂದ ಕುಳಿತಂತೆ ಭಾಸವಾಯಿತು. ಹಾಗೆ ಮೆಲ್ಲನೆ ಹತ್ತಿರ ಹೋಗಿ ನೋಡಿದರೆ, ಏನಿದು ವಿಚಿತ್ರ ಅನ್ನಿಸಿತು. ಕಡು ಗುಲಾಬಿ ಬಣ್ಣದ ಎಲೆಗಳಿಂದ ಕೂಡಿದ ಸಸ್ಯ ದೂರದಿಂದ ನೋಡಲು ಚಿಟ್ಟೆಯಂತೆ ಕಾಣುತಿತ್ತು. ಅದರ ಚಿಗುರು ಮೂಡುವುದೇ ಚಿಟ್ಟೆಯಾಕಾರದಲ್ಲಿ ಎಂಬುದು ಆಗ ಅರಿವಿಗೆ ಬಂತು. ಬೆಳೆಯುತ್ತಾ ಹೋದಂತೆ ಎಲೆಗಳು ದೊಡ್ಡ ಗಾತ್ರವನ್ನು ಪಡೆಯುತ್ತವೆ. ಸಾಮಾನ್ಯವಾಗಿ 25–30 ಸೆಂ.ಮೀ.ನಷ್ಟು ಉದ್ದಬೆಳೆಯುವ ಈ ಸಸ್ಯದ ತುದಿಯಲ್ಲಿ ತಿಳಿಹಳದಿ ಬಣ್ಣದ ಹೂವಿನ ಗೊಂಚಲನ್ನು ಕಾಣಬಹುದು.ಇದರ ಎಲೆಯ ಬಣ್ಣಕ್ಕೆ ಆಂಥೋಸಯಾನಿನ್ ಎನ್ನುವ ಅಂಶವೇ ಕಾರಣ. ಅದು ಹೆಚ್ಚಾದಷ್ಟೂ ಬಣ್ಣ ತಿಳಿಗುಲಾಬಿಯಿಂದ ಕಡುಗುಲಾಬಿಯಾಗುತ್ತಾ ಹೋಗುತ್ತದೆ. ಅಂತೂ ಎಲೆಯ ಆಕಾರ ಚಿಟ್ಟೆಗಳಿಗೆ ಹೋಲಿಕೆಯಾಗುವುದು ಪ್ರಕೃತಿ ವಿಸ್ಮಯವಲ್ಲದೆ ಮತ್ತೇನು?

–ಶೃತಿ ಸಿ.ಎಸ್., ಶೃಂಗೇರಿ



ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.

ಇಮೇಲ್ ವಿಳಾಸ

editorsu@sudha.co.in